# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೆಂಟನೆಯ ಅಧಿವೇಶನ
(ಮುಂದುವರೆದ ಉಪವೇಶನಗಳು)

**ಕಾರ್ಯಕಲಾಪಗಳ ಪಟ್ಟಿ**
ಮಂಗಳವಾರ, ದಿನಾಂಕ:17ನೇ ಮಾರ್ಚ್, 2026
**(ಸಮಯ: ಬೆಳಗ್ಗೆ: 10.30 ಗಂಟೆಗೆ)**

*****

## 1. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಹನ್ನೊಂದನೇ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಹನ್ನೊಂದನೇ ಪಟ್ಟಿ

## 2. ಶೂನ್ಯವೇಳೆ ಪ್ರಸ್ತಾವಗಳು

## 3. ಗಮನ ಸೆಳೆಯುವ ಸೂಚನೆಗಳು

1. **ಶ್ರೀ ಬಸನಗೌಡ ಬಾದರ್ಲಿ** ಅವರು ಸಿಂಧನೂರು ಹಾಗೂ ಸುತ್ತಮುತ್ತಲಿನ ತಾಲ್ಲೂಕುಗಳ ರೈತರುಗಳು ಬೆಳೆ ಸಮೀಕ್ಷೆ ಅರ್ಜಿಗಳಲ್ಲಿ ಜೋಳ ಬೆಳೆದಿರುವುದಾಗಿ ತಪ್ಪು ಮಾಹಿತಿಯನ್ನು ನಮೂದಿಸಿ ಜೋಳ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟಕ್ಕೆ ಹೆಸರುಗಳನ್ನು ನೊಂದಾಯಿಸುತ್ತಿದ್ದು, ಇದರಿಂದಾಗಿ ನೈಜ ಜೋಳ ಬೆಳೆಯುವ ರೈತರು ಸಂಕಷ್ಟಕ್ಕೀಡಾಗಿರುವ ಬಗ್ಗೆ **ಮಾನ್ಯ ಕಂದಾಯ** ಸಚಿವರ ಗಮನ ಸೆಳೆಯುವುದು.

2. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಿಪ್ಪರಗಿ ಬ್ಯಾರೇಜ್ ಗೇಟ್ ದುರಸ್ಥಿಗೊಂಡು ನೀರು ಪೋಲಾಗುತ್ತಿರುವ ಬಗ್ಗೆ **ಮಾನ್ಯ ಉಪ ಮುಖ್ಯಮಂತ್ರಿಗಳ** ಗಮನ ಸೆಳೆಯುವುದು.

...2

3. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯಾದ್ಯಂತ ಹಲವಾರು ವರ್ಷಗಳಿಂದ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಗ್ರೂಪ್ ಸಿ ಮತ್ತು ಡಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸದೆ ಹೊರಗುತ್ತಿಗೆ ಮೂಲಕ ಭರ್ತಿ ಮಾಡುತ್ತಿರುವ ಬಗ್ಗೆ **ಮಾನ್ಯ ಉನ್ನತ ಶಿಕ್ಷಣ** ಸಚಿವರ ಗಮನ ಸೆಳೆಯುವುದು.

4. **ಶ್ರೀ ಎಫ್.ಹೆಚ್. ಜಕ್ಕಪ್ಪನವರ್** ಅವರು ರಾಜ್ಯಾದ್ಯಂತ ಸಂಚಾರಿ ಆರೋಗ್ಯ ಘಟಕಗಳನ್ನು (MHU) ಜಾರಿಗೆ ತರಲು ಬಿಡುಗಡೆಯಾದ ಅನುದಾನವು ಸದ್ಬಳಕೆಯಾಗದೆ ದುರುಪಯೋಗವಾಗುತ್ತಿರುವುದರಿಂದ ಬಡರೋಗಿಗಳು ತುರ್ತು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುತ್ತಿರುವ ಬಗ್ಗೆ **ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ** ಗಮನ ಸೆಳೆಯುವುದು.

5. **ಡಾ: ಯತೀಂದ್ರ** ಅವರು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ ವಸತಿ ಯೋಜನೆಯಡಿ ತಮ್ಮ ಕೃಷಿ ಭೂಮಿಯಲ್ಲಿ ಕಟ್ಟಡ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಪ್ರತ್ಯೇಕ ವರ್ಗೀಕರಣ ಮಾಡಿ, ಇ-ಸ್ವತ್ತು ಸೃಜಿಸಲು ಅವಕಾಶ ಕಲ್ಪಿಸಿಕೊಡುವ ಬಗ್ಗೆ **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ** ಗಮನ ಸೆಳೆಯುವುದು.

6. **ಶ್ರೀ ಸಿ.ಟಿ. ರವಿ** ಅವರು ವಿವಿಧ ಇಲಾಖೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರಿಗೆ ಬಾಕಿಯಿರುವ ಹಣವನ್ನು ಬಿಡುಗಡೆ ಮಾಡುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಗಳ** ಗಮನ ಸೆಳೆಯುವುದು.

## 4. ನಿಯಮ 330ರ ಮೇರೆಗೆ

1. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಸಿ.ಟಿ. ರವಿ, ಡಾ: ತಳವಾರ್ ಸಾಬಣ್ಣ, ಶ್ರೀ ಎಸ್.ಎಲ್. ಭೋಜೇಗೌಡ ಹಾಗೂ ಇತರರು** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ/ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದೇ, ರಾಜ್ಯ ಸರ್ಕಾರವು ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಕುರಿತು ಪ್ರಸ್ತಾಪಿಸುವುದು. **(ಮಾನ್ಯ ಮುಖ್ಯಮಂತ್ರಿಗಳು)**

2. **ಡಾ: ಕೆ. ಗೋವಿಂದರಾಜ್** ಅವರು ಬೆಂಗಳೂರಿನ ಸುತ್ತಮುತ್ತಲಿನ 110 ಹಳ್ಳಿಗಳ ಸರ್ವತೋಮುಖ ಬೆಳವಣಿಗೆಗೆ ಬಿ.ಬಿ.ಎಂ.ಪಿ ಮತ್ತು ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದರೂ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗಿರುವ ಕುರಿತು ಪ್ರಸ್ತಾಪಿಸುವುದು. **(ಮಾನ್ಯ ಉಪ ಮುಖ್ಯಮಂತ್ರಿಗಳು)**

3. **ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಡಿ.ಎಸ್. ಅರುಣ್, ಶ್ರೀ ಕೆ.ಎಸ್. ನವೀನ್ ಹಾಗೂ ಶ್ರೀ ಕೇಶವ ಪ್ರಸಾದ್ ಎಸ್** ಅವರುಗಳು ಕಬ್ಬಿಗೆ ಬೆಲೆ ನಿಗದಿಪಡಿಸಿ ಎಮ್.ಎಸ್.ಪಿ. ದರವನ್ನು ಹೆಚ್ಚಿಸುವುದು ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಉತ್ಪಾದಿಸುವ ಇಥೆನಾಲ್ ದ್ರವ ಆಯಿಲ್‌ನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಖರೀದಿಸುವುದನ್ನು ಹೊರತುಪಡಿಸುವುದರ ಕುರಿತು ಪ್ರಸ್ತಾಪಿಸುವುದು. **(ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)**

4. **ಡಾ: ಎಂ.ಜಿ. ಮುಳೆ** ಅವರು ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಯೋಜನೆಯ ಸಂತ್ರಸ್ತರಿಗೆ ಬಾಕಿಯಿರುವ ವೈಜ್ಞಾನಿಕ ಪರಿಹಾರ ಮತ್ತು ವಿಶೇಷ ಪ್ಯಾಕೇಜ್ ಘೋಷಿಸುವ ಕುರಿತು **ಪ್ರಸ್ತಾಪಿಸುವುದು. (ಮಾನ್ಯ ಉಪ ಮುಖ್ಯಮಂತ್ರಿಗಳು)**

## 5. ಅರ್ಧ ಗಂಟೆ ಕಾಲಾವಧಿ ಚರ್ಚೆ

ಅ. ರಾಜ್ಯದ ಔಷಧ ಉಗ್ರಾಣಗಳಲ್ಲಿ ಔಷಧಗಳ ಕೊರತೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ದಿನಾಂಕ:09.03.2026ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:74(578+629)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಡಾ:ಧನಂಜಯ ಸರ್ಜಿ** ಮತ್ತು **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ**. ಅವರುಗಳಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಆ. ಅವಳಿ ಜಿಲ್ಲೆಗಳಲ್ಲಿ ಪೂರಕ ಕೈಗಾರಿಕೆಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಿರುವ ಬಗ್ಗೆ ದಿನಾಂಕ:10.03.2026ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:76(812)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಪಿ.ಹೆಚ್. ಪೂಜಾರ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಇ. ಅರಣ್ಯವಾಸಿಗಳ ಪುನರ್ವಸತಿ ಕೇಂದ್ರಗಳ ಬಗ್ಗೆ ದಿನಾಂಕ:09.03.2026ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:75(579)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

...4

ಈ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಆಸ್ತಿಗಳ ಖಾತಾ ವಿಭಜನೆ ಜಾರಿ ಮಾಡುವ ಬಗ್ಗೆ ದಿನಾಂಕ:29.01.2026ರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:245(279)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಟಿ.ಎನ್. ಜವರಾಯಿ ಗೌಡ** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಉ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳಿಗೆ ಅತ್ಯಲ್ಪ ದರದಲ್ಲಿ CA ಸೈಟ್‌ಗಳನ್ನು ಮಂಜೂರು ಮಾಡಿರುವ ಬಗ್ಗೆ ದಿನಾಂಕ:10.03.2026ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:77(741)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಡಿ.ಎಸ್. ಅರುಣ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಊ. ಬೆಂಗಳೂರಿನ ಬಿ.ಎಸ್.ಎನ್.ಎಲ್ ಎಂಪ್ಲಾಯಿಸ್ ಅಂಡ್ ಸಿಟಿಜನ್ಸ್ ಹೌಸ್ ಬಿಲ್ಡಿಂಗ್ ಸೊಸೈಟಿ ಕಾರ್ಯಚಟುವಟಿಕೆಗಳ ಬಗ್ಗೆ ದಿನಾಂಕ:12.03.2026ರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:943(1106)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ರಮೇಶ್ ಬಾಬು** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

## 6. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ.

**(ಆರನೇ ದಿನ)**

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

---

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
**www.kla.kar.nic.in/council/council.htm**